KATK510033792024

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕುಣಿಗಲ್**

**ಉಪಸ್ಥಿತರು: ಶ್ರೀಮತಿ ಸುಜಾತ ಎ ಬಿ.**

**ಬಿ.ಎ.ಎಲ್., ಎಲ್.ಎಲ್.ಬಿ.,**

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

**ದಿನಾಂಕಃ 3ನೇ ಜೂನ್ ಮಾಹೆ – 2026**

**ಸಿ.ಸಿ. ನಂಃ 2177/2024**

**ಫಿರ್ಯಾದುದಾರರು :** **ಕರ್ನಾಟಕ ಸರ್ಕಾರವನ್ನು ಪ್ರತಿನಿಧಿಸುವವರು**
**ಪೊಲೀಸ್ ಉಪನಿರೀಕ್ಷಕರು**
ಕುಣಿಗಲ್ ಪೊಲೀಸ್ ಠಾಣೆ, ಕುಣಿಗಲ್.
(ಪ್ರತಿನಿಧಿಸುವವರು ಮಾನ್ಯ ಸಹಾಯಕ ಸರ್ಕಾರಿ
ಅಭಿಯೋಜಕರು

***–ವಿರುದ್ಧ–***

**ಆರೋಪಿ :** **ಮಹಂತೇಶ್ ಬಿನ್ ಲೇ. ಬಸವಣ್ಣ ವಿ.ಟಿ,**
ವಯಸ್ಸು ಸುಮಾರು 30 ವರ್ಷ,
ಕೆಎ–16–ಎ–8428 ಲಾರಿ ಚಾಲಕ,
ಗೋಪಿಶೆಟ್ಟಿಯೂರು, ರಾಮಪುರ ಹೋಬಳಿ,
ಹನೂರು ತಾಲ್ಲೂಕು,ಚಾಮರಾಜನಗರ ಜಿಲ್ಲೆ.

**(ಆರೋಪಿ ಪರ ಶ್ರೀ.ಡಿ.ಕೆ.ಜಿ, ವಕೀಲರು)**

| | |
|---|---|
| ಪ್ರಕರಣ ದಾಖಲಾದ ದಿನಾಂಕ | 05.05.2024 |
| ಪ್ರಕರಣದ ಸ್ವರೂಪ | ಭಾರತೀಯ ದಂಡ ಸಂಹಿತೆ ಕಲಂ.279, 337, 338 ಮತ್ತು 304(ಎ) |
| ವಿಚಾರಣೆ ಪ್ರಾರಂಭವಾದ ದಿನಾಂಕ | 21.05.2026 |
| ವಿಚಾರಣೆ ಮುಕ್ತಾಯವಾದ ದಿನಾಂಕ | 26.05.2026 |
| ತೀರ್ಪು ನೀಡಿದ ದಿನಾಂಕ | 03.06.2026 |

**Sd/-**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ. ಕುಣಿಗಲ್.**

## ತೀರ್ಪು

ಕುಣಿಗಲ್ ಪೊಲೀಸ್ ಠಾಣೆಯ ಠಾಣಾಧಿಕಾರಿಯು ಮೇಲ್ಕಂಡ ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.279, 337, 338 ಮತ್ತು 304(ಎ)ಅಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಎಸಗಿರುತ್ತಾರೆಂದು ಪ್ರಸ್ತುತ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

2. **<u>ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿರುತ್ತವೆಃ-</u>**

ದಿನಾಂಕ 05/05/2024 ರಂದು ಬೆಳಿಗ್ಗೆ ಸುಮಾರು 05.30 ರ ಸಮಯದಲ್ಲಿ ಕುಣಿಗಲ್ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಹಾಸನ - ಬೆಂಗಳೂರು ಎನ್.ಹೆಚ್-75 ಮುಖ್ಯರಸ್ತೆಯಲ್ಲಿ ಬರುವ ಹಮಾಮ್ ಯೂ-ಟರ್ನ್ ಬಳಿಯ ಮುಖ್ಯರಸ್ತೆಯಲ್ಲಿ ನರಸಿಂಹಮೂರ್ತಿ, ಚಾಸಾ.1 ರಿಂದ 4 ರವರು ಬೆಂಗಳೂರಿನಿಂದ ಬೆಳ್ಳೂರು ಕ್ರಾಸ್ ನ ಬಳಿ ಇರುವ ಆದಿ ಚುಂಚನಗಿರಿ ದೇವಸ್ಥಾನಕ್ಕೆ ಹೋಗಲು ಕೆಎ-04-ಎಂಎ-5881 ನೇ ನಂಬರಿನ ಕಾರನ್ನು ನರಸಿಂಹಮೂರ್ತಿ ರವರು ಚಾಲನೆ ಮಾಡಿಕೊಂಡು ದೇವಸ್ಥಾನಕ್ಕೆ ಹೋಗುತ್ತಿರುವಾಗ್ಗೆ ಆರೋಪಿಯು ಕೆಎ-16-ಎ-8428 ನೇ ನಂಬರಿನ ಲಾರಿಯನ್ನು ಹಾಸನ ಕಡೆಯಿಂದ ಬೆಂಗಳೂರು ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮತ್ತೆ ಮಾರ್ಕೋನಹಳ್ಳಿ ರಸ್ತೆಗೆ ಹೋಗಲೆಂದು ಯೂ-ಟರ್ನ್ ಬಳಿ ತನ್ನ ವಾಹನಕ್ಕೆ ಯಾವುದೇ ಇಂಡಿಕೇಟರ್ ಮತ್ತು ಸೂಚನೆಯನ್ನು ನೀಡದೇ ಅತಿವೇಗವಾಗಿ ದಕ್ಷಿಣ ಭಾಗದ ಬಲಭಾಗದ ರಸ್ತೆಗೆ ತಿರುಗಿಸಿ ಕಾರಿನ

ಮುಂಭಾಗದ ಬಲಭಾಗಕ್ಕೆ ಗುದ್ದಿ ಅಪಘಾತವಾಗಿ ಎರಡು ವಾಹನಗಳು ಜಖಂಗೊಂಡ ಪರಿಣಾಮ ಚಾಸಾ.3 ಬಲಹಣೆಗೆ ಪೆಟ್ಟಾಗಿ ಸಾಮಾನ್ಯ ಸ್ವರೂಪದ ಗಾಯಗಳಾಗಿ ಹಾಗೂ ಚಾಸಾ-2 ರವರ ಮುಖಕ್ಕೆ ಎಡಕೈಗೆ ಹಾಗೂ ಚಾಸಾ.4 ರವರ ಮುಖಕ್ಕೆ ಪೆಟ್ಟಾಗಿ ಹಲ್ಲುಗಳ ಭಾಗಕ್ಕೆ ಗಂಭೀರ ಸ್ವರೂಪದ ರಕ್ತಗಾಯಗಳಾಗಿದ್ದು, ನರಸಿಂಹಮೂರ್ತಿ ರವರ ತಲೆಗೆ, ಹಣೆಗೆ ಮತ್ತು ಕೈಕಾಲುಗಳಿಗೆ ತೀವ್ರ ತರಹದ ರಕ್ತಗಾಯಗಳಾಗಿ ಸ್ಥಳದಲ್ಲಿ ಮೃತಪಟ್ಟಿದ್ದು, ಎಂಬುದಾಗಿ ಚಾಸಾ-1 ರವರು ನೀಡಿದ ದೂರಿನ ಮೇಲೆ ಪೊಲೀಸರು ಇತರೆ ತನಿಖೆ ಕೈಗೊಂಡು ಮೇಲ್ಕಂಡ ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 279, 337, 338 ಮತ್ತು 304(ಎ) ಅಡಿಯಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ಆರೋಪಿಯು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆಗೊಂಡಿರುತ್ತಾರೆ. ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ. 207 ರಡಿಯಲ್ಲಿ ಅಭಿಯೋಜನೆಯ ದಾಖಲೆಗಳನ್ನು ಪೂರೈಸಲಾಗಿದೆ. ನಂತರ ಭಾ.ದಂ.ಸಂ.ಕಲಂ. ಭಾರತೀಯ ದಂಡ ಸಂಹಿತೆ ಕಲಂ.279, 337, 338 ಮತ್ತು

304(ಎ) ಅಡಿಯಲ್ಲಿ ಆರೋಪಿ ವಿರುದ್ಧ ಆಪಾದನೆಯ ಸಾರಾಂಶವನ್ನು ರಚಿಸಿ, ಓದಿ ಹೇಳಲಾಯಿತು. ಆರೋಪಿಯು ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

**4.** ನಂತರ ಅಭಿಯೋಜನೆಯವರು ತಮ್ಮ ಪರ ಪ್ರಾಸಾ–1 ರಿಂದ 4 ಸಾಕ್ಷಿದಾರರನ್ನು ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿಕೊಂಡು ನಿಪಿ–1 ರಿಂದ 11 ರ ನಿಶಾನೆಗಳನ್ನು ಗುರುತಿಸಿಕೊಂಡಿರುತ್ತಾರೆ. ಪ್ರಾಸಾ–1 ರಿಂದ 4 ರವರು ಅಭಿಯೋಜನೆಗೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುವುದರಿಂದ ದಂ.ಪ್ರ.ಸಂ.ಕಲಂ 313 ರೀತ್ಯಾ ಪಡೆದುಕೊಳ್ಳಬೇಕಾದ ಆರೋಪಿಯ ಹೇಳಿಕೆಗೆ ವಿನಾಯಿತಿ ನೀಡಲಾಯಿತು.

**5.** ನಂತರ ವಾದ, ಪ್ರತಿವಾದಗಳನ್ನು ಆಲಿಸಲಾಯಿತು. ಕೆಳಕಂಡ ಅಂಶಗಳು ಪ್ರಕರಣದ ಇತ್ಯರ್ಥಕ್ಕಾಗಿ ಮೂಡಿ ಬಂದಿತು.

> **1.** ದಿನಾಂಕ 05/05/2024 ರಂದು ಬೆಳಿಗ್ಗೆ ಸುಮಾರು 05.30 ರ ಸಮಯದಲ್ಲಿ ಕುಣಿಗಲ್ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಹಾಸನ – ಬೆಂಗಳೂರು ಎನ್.ಹೆಚ್–75 ಮುಖ್ಯರಸ್ತೆಯಲ್ಲಿ ಬರುವ

ಹಮಾಮ್ ಯೂ–ಟರ್ನ್ ಬಳಿಯ ಮುಖ್ಯರಸ್ತೆಯಲ್ಲಿ ನರಸಿಂಹಮೂರ್ತಿ, ಚಾಸಾ.1 ರಿಂದ 4 ರವರು ಬೆಂಗಳೂರಿನಿಂದ ಬೆಳ್ಳೂರು ಕ್ರಾಸ್ ನ ಬಳಿ ಇರುವ ಆದಿ ಚುಂಚನಗಿರಿ ದೇವಸ್ಥಾನಕ್ಕೆ ಹೋಗಲು ಕೆಎ–04–ಎಂಎ–5881 ನೇ ನಂಬರಿನ ಕಾರನ್ನು ನರಸಿಂಹಮೂರ್ತಿ ರವರು ಚಾಲನೆ ಮಾಡಿಕೊಂಡು ದೇವಸ್ಥಾನಕ್ಕೆ ಹೋಗುತ್ತಿರುವಾಗ್ಗೆ ಆರೋಪಿಯು ಕೆಎ–16–ಎ–8428 ನೇ ನಂಬರಿನ ಲಾರಿಯನ್ನು ಹಾಸನ ಕಡೆಯಿಂದ ಬೆಂಗಳೂರು ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮತ್ತೆ ಮಾರ್ಕೋನಹಳ್ಳಿ ರಸ್ತೆಗೆ ಹೋಗಲೆಂದು ಯೂ–ಟರ್ನ್ ಬಳಿ ತನ್ನ ವಾಹನಕ್ಕೆ ಯಾವುದೇ ಇಂಡಿಕೇಟರ್ ಮತ್ತು ಸೂಚನೆಯನ್ನು ನೀಡದೇ ಅತಿವೇಗವಾಗಿ ದಕ್ಷಿಣ ಭಾಗದ ಬಲಭಾಗದ ರಸ್ತೆಗೆ ತಿರುಗಿಸಿ ಕಾರಿನ ಮುಂಭಾಗದ ಬಲಭಾಗಕ್ಕೆ ಗುದ್ದಿ ಅಪಘಾತವಾಗಿ ಎರಡು ವಾಹನಗಳು ಜಖಂಗೊಂಡಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 279ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು

ಅಭಿಯೋಜನೆಯವರು ಸಂಶಯತೀತವಾಗಿ ರುಜುವಾತು ಪಡಿಸುತ್ತಾರೆಯೇ?

**2.** ಮುಂದುವರೆದು ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯು ಸದರಿ ಅಪಘಾತಪಡಿಸಿದ ಪರಿಣಾಮ ಚಾಸಾ.3 ಬಲಹಣೆಗೆ ಪೆಟ್ಟಾಗಿ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 337 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯತೀತವಾಗಿ ರುಜುವಾತು ಪಡಿಸುತ್ತಾರೆಯೇ?

**3.** ಮುಂದುವರೆದು ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯು ಸದರಿ ಅಪಘಾತಪಡಿಸಿದ ಪರಿಣಾಮ ಚಾಸಾ–2 ರವರ ಮುಖಕ್ಕೆ, ಎಡಕೈಗೆ ಹಾಗೂ ಚಾಸಾ.4 ರವರ ಮುಖಕ್ಕೆ ಪೆಟ್ಟಾಗಿ ಹಲ್ಲುಗಳ ಭಾಗಕ್ಕೆ ಗಂಭೀರ ಸ್ವರೂಪದ ರಕ್ತಗಾಯಗಳಾಗಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 338 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯತೀತವಾಗಿ ರುಜುವಾತು ಪಡಿಸುತ್ತಾರೆಯೇ?

4. ಮುಂದುವರೆದು ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯು ಸದರಿ ಅಪಘಾತಪಡಿಸಿದ ಪರಿಣಾಮ ನರಸಿಂಹಮೂರ್ತಿ ರವರ ತಲೆಗೆ, ಹಣೆಗೆ ಮತ್ತು ಕೈಕಾಲುಗಳಿಗೆ ತೀವ್ರ ತರಹದ ರಕ್ತಗಾಯಗಳಾಗಿ ಸ್ಥಳದಲ್ಲಿ ಮೃತಪಟ್ಟಿದ್ದು ಆ ಮೂಲಕ ಭಾ.ದಂ.ಸಂ. ಕಲಂ.304(ಎ)ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯತೀತವಾಗಿ ರುಜುವಾತು ಪಡಿಸುತ್ತಾರೆಯೇ?

5. ಏನು ಆದೇಶ?

6. ಮೇಲ್ಕಂಡ ಅಂಶಗಳನ್ನು ಈ ಕೆಳಕಂಡಂತೆ ಉತ್ತರಿಸುತ್ತೇನೆ.

**ಅಂಶ ಸಂಖ್ಯೆ : 1 : ನಕರಾತ್ಮಕವಾಗಿ**

**ಅಂಶ ಸಂಖ್ಯೆ : 2 : ನಕರಾತ್ಮಕವಾಗಿ**

**ಅಂಶ ಸಂಖ್ಯೆ : 3 : ನಕರಾತ್ಮಕವಾಗಿ**

**ಅಂಶ ಸಂಖ್ಯೆ : 4 : ನಕರಾತ್ಮಕವಾಗಿ**

**ಅಂಶ ಸಂಖ್ಯೆ : 5 : ಅಂತಿಮ ಆದೇಶದಂತೆ,**

**ಈ ಕೆಳಕಂಡ ಕಾರಣಗಳಿಗಾಗಿ**

**::ಕಾರಣಗಳು::**

7. **ಅಂಶ ಸಂಖ್ಯೆ 1 ರಿಂದ 4**:- ಎಲ್ಲಾ ಅಂಶಗಳು ಒಂದಕ್ಕೊಂದು ಸಂಬಂಧಪಟ್ಟಿದ್ದು ಮತ್ತು ಸಾಕ್ಷ್ಯಗಳ ಪುನರಾವರ್ತನೆ ತಪ್ಪಿಸಲು ಇವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಂಡು ಚರ್ಚಿಸಿ ಕಾರಣ ನೀಡಿರುತ್ತೇನೆ.

ಅಭಿಯೋಜನೆಯವರು ಆರೋಪಿಯ ವಿರುದ್ಧ ಹೊರಿಸಿರುವ ಆರೋಪಗಳನ್ನು ರುಜುವಾತುಡಿಸಲು ತಮ್ಮ ಪರವಾಗಿ ಒಟ್ಟು ನಾಲ್ವರು ಸಾಕ್ಷಿದಾರರನ್ನು ಪ್ರಾಸಾ.1 ರಿಂದ 4 ರಂತೆ ವಿಚಾರಣೆಗೆ ಗುರಿಪಡಿಸಿರುತ್ತಾರೆ. ಹಾಗೆಯೇ ತಮ್ಮ ಪರವಾಗಿ ಒಟ್ಟು 11 ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮೇಣ ನಿ.ಪಿ.1 ರಿಂದ 11 ಎಂಬುದಾಗಿ ಗುರುತಿಸಿಕೊಂಡಿರುತ್ತಾರೆ.

8. ಈ ಪ್ರಕರಣದ ದೂರುದಾರರ/ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-1 ರವರನ್ನು ಅಭಿಯೋಜನೆಯು ಪ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.1 ಪ್ರೇಮ್ ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದ ಬಗ್ಗೆ ತನಗೆ ಗೊತ್ತಿಲ್ಲ, ಆರೋಪಿಯನ್ನು ತಾನು ನೋಡಿರುವುದಿಲ್ಲ, ಮೃತ ನರಸಿಂಹ ಮೂರ್ತಿ ರವರು ತನ್ನ ತಂದೆ, ಚಾಸಾ.2 ತನ್ನ ತಾಯಿ, ಚಾಸಾ.3 ತನ್ನ ತಮ್ಮ, ಚಾಸಾ.4 ತನ್ನ ಚಿಕ್ಕಮ್ಮ,

ತಾನು ಯಾವುದೇ ದೂರನ್ನು ನಿಪಿ.1 ರಂತೆ ಪೋಲಿಸಿನವರಿಗೆ ನೀಡಿರುವುದಿಲ್ಲ, ನಿಪಿ.2 ಸ್ಥಳ ಪಂಚನಾಮೆ, ನಿಪಿ.3 ಕಚ್ಚಾ ನಕಾಶೆ ಮತ್ತು ನಿಪಿ.4 ವಾಹನ ಅಮಾನತ್ತು ಪಂಚನಾಮೆಯಾಗಿದ್ದು, ಅವುಗಳಿಗೆ ಸುಮಾರು 2-3 ವರ್ಷಗಳ ಹಿಂದೆ ತಾನು ಠಾಣೆಯಲ್ಲಿ ಸಹಿ ಮಾಡಿದ್ದು, ನಿಪಿ.1 ರಿಂದ 4 ರಲ್ಲಿ ಬರೆದಿರುವ ಮಾಹಿತಿಗಳು ತನಗೆ ಗೊತ್ತಿಲ್ಲ, ನಿಪಿ.1 ರಿಂದ 4 ರಲ್ಲಿ ಮಾಡಿ ಪೋಲಿಸರು ಏನು ಮಾಡಿರುತ್ತಾರೆ ಎಂಬುದು ತನಗೆ ಗೊತ್ತಿಲ್ಲ, ನಿಪಿ.1 ರಿಂದ ನಿಪಿ.4 ರಲ್ಲಿ ಬರೆದಿರುವ ವಿಚಾರಗಳು ತನಗೆ ತಿಳಿದಿರುವುದಿಲ್ಲ, ತಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಸಂಪೂರ್ಣವಾಗಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದ್ದರೂ ಸದರಿ ಪಾಟೀ ಸವಾಲಿನಲ್ಲಿ ಅಭಿಯೋಜನೆ ಸಾಕ್ಷಿಗೆ ಯಾವುದೇ ಪೂರಕವಾದ ಹೇಳಿಕೆಯನ್ನು ನೀಡಿರುವುದಿಲ್ಲ.

**9.** ಈ ಪ್ರಕರಣದ ಗಾಯಾಳು ಸಾಕ್ಷಿದಾರರಾದ ಚಾಸಾ-2 ರವರನ್ನು ಅಭಿಯೋಜನೆಯು ಪ್ರಾಸಾ-2 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.2 ಸೌಭಾಗ್ಯ ರವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದ ಬಗ್ಗೆ ತನಗೆ ಗೊತ್ತಿಲ್ಲ,

ಆರೋಪಿಯನ್ನು ತಾನು ನೋಡಿರುವುದಿಲ್ಲ, ಮೃತ ನರಸಿಂಹಮೂರ್ತಿ ತನ್ನ ಗಂಡ, ಚಾಸಾ.1 ರವರು ಮತ್ತು ಚಾಸಾ.3 ತನ್ನ ಮಕ್ಕಳು, ಚಾಸಾ.4 ರವರು ತನ್ನ ತಂಗಿ, ತಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಸಂಪೂರ್ಣವಾಗಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದ್ದರೂ ಸದರಿ ಪಾಟೀ ಸವಾಲಿನಲ್ಲಿ ಅಭಿಯೋಜನೆ ಸಾಕ್ಷಿಗೆ ಯಾವುದೇ ಪೂರಕವಾದ ಹೇಳಿಕೆಯನ್ನು ನೀಡಿರುವುದಿಲ್ಲ.

10. ಈ ಪ್ರಕರಣದ ಮತ್ತೋರ್ವ ಗಾಯಾಳು ಸಾಕ್ಷಿದಾರರಾದ ಚಾಸಾ-4 ರವರನ್ನು ಅಭಿಯೋಜನೆಯು ಫ್ರಾಸಾ-3 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಫ್ರಾಸಾ.3 ಭಾರತಿ ರವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದ ಬಗ್ಗೆ ತನಗೆ ಗೊತ್ತಿಲ್ಲ, ಆರೋಪಿಯನ್ನು ತಾನು ನೋಡಿರುವುದಿಲ್ಲ, ಮೃತ ನರಸಿಂಹಮೂರ್ತಿ ತನ್ನ ಭಾವ, ಚಾಸಾ.1 ಮತ್ತು ಚಾಸಾ.3 ತನ್ನ ಅಕ್ಕನ ಮಕ್ಕಳು, ಚಾಸಾ.2 ರವರು ತನ್ನ ಅಕ್ಕ, ತಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಸಂಪೂರ್ಣವಾಗಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ.

ಇವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದ್ದರು ಸದರಿ ಪಾಟೀ ಸವಾಲಿನಲ್ಲಿ ಅಭಿಯೋಜನೆ ಸಾಕ್ಷಿಗೆ ಯಾವುದೇ ಪೂರಕವಾದ ಹೇಳಿಕೆಯನ್ನು ನೀಡಿರುವುದಿಲ್ಲ.

11. ಈ ಪ್ರಕರಣದ ಮತ್ತೋರ್ವ ಗಾಯಾಳು ಸಾಕ್ಷಿದಾರರಾದ ಚಾಸಾ–3 ರವರನ್ನು ಅಭಿಯೋಜನೆಯು ಫ್ರಾಸಾ–4 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಫ್ರಾಸಾ.4 ಚಂದನ್ ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದ ಬಗ್ಗೆ ತನಗೆ ಗೊತ್ತಿಲ್ಲ, ಆರೋಪಿಯನ್ನು ತಾನು ನೋಡಿರುವುದಿಲ್ಲ, ಮೃತ ನರಸಿಂಹಮೂರ್ತಿ ತನ್ನ ತಂದೆ, ಚಾಸಾ.1 ರವರು ತನ್ನ ಅಣ್ಣ, ಚಾಸಾ.2 ರವರು ತನ್ನ ತಾಯಿ, ಚಾಸಾ.4 ರವರು ತನ್ನ ಚಿಕ್ಕಮ್ಮ, ತಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಸಂಪೂರ್ಣವಾಗಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದ್ದರು ಸದರಿ ಪಾಟೀ ಸವಾಲಿನಲ್ಲಿ ಅಭಿಯೋಜನೆ ಸಾಕ್ಷಿಗೆ ಯಾವುದೇ ಪೂರಕವಾದ ಹೇಳಿಕೆಯನ್ನು ನೀಡಿರುವುದಿಲ್ಲ.

12. ಈ ಪ್ರಕರಣದಲ್ಲಿ ಫ್ರಾಸಾ.1 ದೂರುದಾರ/ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಯಾವುದೇ ದೂರು ನೀಡಿರುವುದಿಲ್ಲ ಹಾಗೂ ಪ್ರಕರಣದ ಬಗ್ಗೆ ತನಗೆ ಗೊತ್ತಿಲ್ಲ, ಎಂದು ಸಾಕ್ಷ್ಯ ನುಡಿದಿರುತ್ತಾರೆ. ಫ್ರಾಸಾ 2 ರಿಂದ 4 ರವರು ಗಾಯಾಳು ಸಾಕ್ಷಿದಾರರಾಗಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ಪ್ರಕರಣದ ಬಗ್ಗೆ ತನಗೆ ಗೊತ್ತಿಲ್ಲ, ತಾನು ಯಾವುದೇ ಹೇಳಿಕೆಯನ್ನು ಪೋಲಿಸರಿಗೆ ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿಯವರು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದ್ದರಿಂದ ಅಭಿಯೋಜನೆಗೆ ಲಾಭದಾಯಕವಾಗುವ ಯಾವುದೇ ಅಂಶಗಳು ಕಂಡುಬಂದಿರುವುದಿಲ್ಲ. ಮುಂದುವರಿದು ವಾಹನ ಪರಿಶೀಲನಾ ವರದಿ, ಶವ ಪಂಚನಾಮೆ ವರದಿ, ಶವ ತನಿಖಾ ವರದಿಗಳನ್ನು ಆರೋಪಿ ಪರ ವಕೀಲರ ಸಮ್ಮತಿಯ ಮೇರೆಗೆ ನಿ ಪಿ.8 ರಿಂದ 10 ಎಂದು ನಿಶಾನಿಕರಿಸಿದ ಕಾರಣ ಚಾಸಾ. 5 ರಿಂದ 10 ಮತ್ತು ಚಾಸಾ.11 ರಿಂದ 13 ಮತ್ತು ಚಾಸಾ.18 ರಿಂದ 20 ರವರನ್ನು ಅಭಿಯೋಜನೆ ಸಾಕ್ಷ್ಯದಿಂದ ಸಮ್ಮತಿಯ ಮೇರೆಗೆ ಕೈಬಿಡಲಾಗಿರುತ್ತದೆ.

13. ಈ ಪ್ರಕರಣದ ಫಿರ್ಯಾಧಿ ಪ್ರಾಸಾ-1ರವರು ಪ್ರಮುಖ ಸಾಕ್ಷಿಯಾಗಿದ್ದು ಸದರಿಯವರ ಸಾಕ್ಷ್ಯವನ್ನು ಪರಿಶೀಲಿಸಿದಾಗ, ಪಿರ್ಯಾದಿಯು ಫಿರ್ಯಾದಿನಲ್ಲಿ ನಮೂದಿಸಿರುವ ಅಂಶಗಳನ್ನು ತನ್ನ ಸಾಕ್ಷ್ಯದಲ್ಲಿ ಹೇಳಿರುವುದಿಲ್ಲ. ಪ್ರಾಸಾ.2 ರಿಂದ 4 ರವರನ್ನು ಪೋಲಿಸರ ಮುಂದೆ ನೀಡಿದ ಹೇಳಿಕೆಯನ್ನು ನ್ಯಾಯಲಯದಲ್ಲಿ ಪುನರಾವರ್ತಿಸಲು ಸಾಧ್ಯವಾಗಲಿಲ್ಲ. ಪ್ರಾಸಾ.1 ರಿಂದ 4 ರವರು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದು, ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಿದರೂ ಸಹ ಅಭಿಯೋಜನೆಯ ಪ್ರಕರಣವನ್ನು ಒಪ್ಪಿಕೊಳ್ಳಲಿಲ್ಲವಾದ್ದರಿಂದ, ಈ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅಭಿಯೋಜನೆಯವರು ಪ್ರಕರಣವನ್ನು ನ್ಯಾಯಾಲಯದಲ್ಲಿ ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುವುದು ಕಂಡುಬಂದ ಕಾರಣ ಆರೋಪಿಯನ್ನು ತಪ್ಪಿತಸ್ಥರೆಂದು ನಿರ್ಧರಿಸಲು ನ್ಯಾಯಾಲಯದ ಮುಂದೆ ಯಾವುದೇ ಸಾಕ್ಷ್ಯಾಧಾರಗಳು ಇರುವುದಿಲ್ಲ.

14. ಬಹು ಮುಖ್ಯವಾಗಿ ದೂರುದಾರ/ ಪ್ರತ್ಯಕ್ಷ ಮತ್ತು ಗಾಯಾಳು ಸಾಕ್ಷಿದಾರಾರ ಪೂರಕ ಸಾಕ್ಷ್ಯದ ಅನುಪಸ್ಥಿತಿಯಲ್ಲಿ ಮತ್ತು ಈ ಪ್ರಕರಣದಲ್ಲಿ

ಲಭ್ಯವಿರುವ ಮೌಖಿಕ ಸಾಕ್ಷ್ಯ ಮತ್ತು ದಾಖಲಾತಿಗಳನ್ನು ಪರಿಶೀಲನೆ ಮಾಡಲಾಗಿ ಆರೋಪಿ ದೋಷಾರೋಪಣ ಪಟ್ಟಿಯಲ್ಲಿ ಹೇಳಿರುವಂತಹ ಯಾವುದೇ ಅಪರಾಧ ಮಾಡಿರುವುದು ಕಂಡು ಬರುವುದಿಲ್ಲ. ಕಾರಣ ನನ್ನ ಅಭಿಪ್ರಾಯದಲ್ಲಿ ಅಭಿಯೋಜನೆ ಪಕ್ಷದವರು ಆರೋಪಿ ವಿರುದ್ಧ ಮಾಡಲಾದ ಆಪಾದನೆಯನ್ನು ಸಂಶಯಾತೀತವಾಗಿ ಸಿದ್ದಪಡಿಸಲು ವಿಫಲರಾಗಿರುತ್ತಾರೆ. ಸಾಕ್ಷಿದಾರರ ವಿಚಾರಣೆ ಮತ್ತು ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಸದರಿ ಸಾಕ್ಷಿದಾರರು ನಿ.ಪಿ.1ರಲ್ಲಿ ಹೇಳಲಾದ ಅಂಶಗಳನ್ನು ಪುನರುಚ್ಚರಿಸಲು ಸಫಲರಾಗಿರುವುದಿಲ್ಲ. ಆರೋಪಿ ಪರ ವಕೀಲರು ಮರಣೋತ್ತರ ವರದಿ ಮತ್ತು ಐ.ಎಂ.ವಿ ವರದಿ, ಮೃತನ ಶವ ಪಂಚನಾಮೆಯನ್ನು ಗುರುತಿಸಲು ಯಾವುದೇ ತಕರಾರು ಇರುವುದಿಲ್ಲ ಎಂದು ಸದರಿಯವರು ಪರಿಶೀಲಿಸಲಾಗಿ ಮೃತರ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ, ಆದರೆ ಅಭಿಯೋಜನೆಯು ಅಪಘಾತವು ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯಿಂದ ಆಗಿರುತ್ತದೆಂದು ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಈ ಮೇಲೆ ಹೇಳಿದ ಎಲ್ಲಾ ಕಾರಣಗಳಿಂದಾಗಿ ಅಪಘಾತದಲ್ಲಿ ಸದರಿ ನರಸಿಂಹಮೂರ್ತಿ ರವರು ಮೃತ

ಪಟ್ಟಿರುತ್ತಾರೆ ಎಂಬುದು ಈ ನ್ಯಾಯಾಲಯದ ಗಣನೆಗೆ ಬಂದರೂ ಸಹ, ಸದರಿ ಅಪಘಾತಕ್ಕೆ ಆರೋಪಿತನೇ ಕಾರಣನಾಗಿರುತ್ತಾನೆ ಎಂಬ ಅಂಶವನ್ನು ಅಭಿಯೋಜನೆಯು ರುಜುವಾತುಪಡಿಸಲು ವಿಫಲರಾಗಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಸಂಶಯದ ಲಾಭವನ್ನು ಆರೋಪಿತನಿಗೆ ನೀಡುವುದಾಗಿ ಈ ನ್ಯಾಯಾಲಯವು ಅಭಿಪ್ರಾಯಪಟ್ಟು, ಸದರಿ ಅಂಶ ಸಂಖ್ಯೆ1 ರಿಂದ 4 ಕ್ಕೆ ನಕಾರಾತ್ಮಕವಾಗಿ ಉತ್ತರಿಸಿದೆ.

15. **ಅಂಶ ಸಂಖ್ಯೆ-5**:- ಈ ಮೇಲ್ಕಂಡ ವಿವಾದಾಂಶಗಳಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ, ಅಂತಿಮ ಆದೇಶ ಈ ಕೆಳಕಂಡಂತೆ.

::**ಆದೇಶ**::

ದಂಡ ಪ್ರಕ್ರಿಯಾ ಸಂಹಿತೆ ಕಲಂ 255 (1)ರ ಅಡಿಯಲ್ಲಿ ವರ್ತಿಸುತ್ತಾ ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 279, 337, 338 ಮತ್ತು 304(ಎ) ರ ಅಡಿಯಲ್ಲಿ ಹೊರಿಸಲಾದಂತಹ ಆರೋಪದಿಂದ ಆರೋಪಿಯನ್ನು ದೋಷಮುಕ್ತಿಗೊಳಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿಯ ಮತ್ತು ಜಾಮೀನುದಾರರ ಮುಚ್ಚಳಿಕೆ ಪತ್ರಗಳನ್ನು ಅಪೀಲು ಅವಧಿ ಮುಗಿದ ನಂತರ ರದ್ದುಪಡಿಸಲು ಆದೇಶಿಸಿದೆ.

ಆರೋಪಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ಅಡಿಯಲ್ಲಿ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಯನ್ನು 6 ತಿಂಗಳ ನಂತರ ರದ್ದುಪಡಿಸಲು ಆದೇಶಿಸಲಾಗಿದೆ.

*(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ನೀಡಿ, ಬಳಿಕ ಅನುಲಿಪಿಯನ್ನು ಪರಿಶೀಲಿಸಿ, ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಅಂದರೆ ದಿನಾಂಕ* ***3ನೇ ಜೂನ್ 2026*** *ರಂದು ಘೋಷಿಸಿದ್ದೇನೆ )*

***Sd/-***

**( ಸುಜಾತ ಎ ಬಿ)**
**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ. ಕುಣಿಗಲ್**

**::ಅನುಬಂಧ::**

**ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ:-**

ಪ್ರಾಸಾ-1 : ಪ್ರೇಮ್ ಕುಮಾರ್
ಪ್ರಾಸಾ-2 : ಸೌಭಾಗ್ಯ
ಪ್ರಾಸಾ-3 : ಭಾರತಿ
ಪ್ರಾಸಾ-4 : ಚಂದನ್ ಕುಮಾರ್

**ಅಭಿಯೋಜನೆಯ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ:–**

| | | |
|---|---|---|
| ನಿಪಿ– 1 | : | ದೂರು |
| ನಿಪಿ– 1(ಎ) | : | ಪ್ರಾಸಾ– 1 ರವರ ಸಹಿ |
| ನಿಪಿ–2 | : | ಸ್ಥಳ ಪಂಚನಾಮೆ |
| ನಿಪಿ–2(ಎ) | : | ಪ್ರಾಸಾ– 1 ರವರ ಸಹಿ |
| ನಿಪಿ–3 | : | ಕಚ್ಚಾ ನಕಾಶೆ |
| ನಿಪಿ–3(ಎ) | : | ಪ್ರಾಸಾ– 1 ರವರ ಸಹಿ |
| ನಿಪಿ–4 | : | ವಾಹನ ಪಂಚನಾಮೆ |
| ನಿಪಿ–4(ಎ) | : | ಪ್ರಾಸಾ– 1 ರವರ ಸಹಿ |
| ನಿಪಿ–5 ರಿಂದ 7 | : | ಪ್ರಾಸಾ– 1 ರಿಂದ 3 ರವರ ಹೇಳಿಕೆಗಳು |
| ನಿಪಿ–8 | : | ಶವ ತನಿಖಾ ವರದಿ |
| ನಿಪಿ–9 | : | ಪಿ ಎಂ ವರದಿ |
| ನಿಪಿ– 10 | : | ಐ ಎಂ ವಿ ವರದಿ |
| ನಿಪಿ– 11 | : | ಪ್ರಾಸಾ–4 ರವರ ಹೇಳಿಕೆ |

**ಆರೋಪಿ ಪರ ಸಾಕ್ಷಿದಾರರುಗಳ ಪಟ್ಟಿ:–** –ಇಲ್ಲ–

**ಆರೋಪಿಯ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ:–** –ಇಲ್ಲ–.

**Sd/-**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂ. ಕುಣಿಗಲ್ .**